**ದಿನಾಂಕಃ 21.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ. ಓ ಎಸ್ ವಕೀಲರಿಂದಃ**

ನಮ್ಮ ಕುಟುಂಬದ ಮೂಲ ಪುರುಷನಾದ ಶಿವನಗೌಡ ಬಿನ್ ಮಲ್ಲಪ್ಪ ಇವರು ಮೂಲತಃ ಹಿರೇಕೆರೂರು ತಾಲ್ಲೂಕು ಕಾಲ್ವಿಹಳ್ಳಿ ಗ್ರಾಮದ ವಾಸಿಯಾಗಿರುತ್ತಾರೆ ಅಂದರೆ ಸರಿ. ಶಿವನಗೌಡ ರವರು ಮಲ್ಲಪ್ಪ ಗೌಡ ರವರ ದತ್ತು ಮಗ ಅಂದರೆ ಸರಿ. ಶಿವನಗೌಡ ರವರು ನನ್ನ ತಾಯಿ ಶಿವಮ್ಮ ರವರನ್ನು ಕಾಲ್ವಿಹಳ್ಳಿಯಲ್ಲಿ ಮದುವೆ ಆಗಿರುತ್ತಾರೆ ಅಂದರೆ ಸರಿ. ಶಿವನಗೌಡ ಮತ್ತು ಶಿವಮ್ಮ ರವರು ನನ್ನ ಮತ್ತು 4 ರಿಂದ 7 ನೇ ಪ್ರತಿವಾದಿಯವರ ತಂದೆ ತಾಯಿ. ನನ್ನ ತಾಯಿ ಶಿವಮ್ಮ ಮೌತಿಯಾದ ನಂತರ ಈ ಪ್ರಕರಣದ 1 ನೇ ಪ್ರತಿವಾದಿ ಸುರ್ವಣಮ್ಮ ರವರು ಮದುವೆ ಆಗಿರುತ್ತಾರೆ ಅಂದರೆ ಸರಿ. ಅವರಿಗೆ 2 ಮತ್ತು 3 ನೇ ಪ್ರತಿವಾದಿಯವರು ಮಕ್ಕಳು ಅಂದರೆ ಸರಿ. ನಾನು ಮತ್ತು ಪ್ರತಿವಾದಿಯವರು ಕಾಲ್ವಿಹಳ್ಳಿಯಲ್ಲಿ ವಾಸವಾಗಿದ್ದೆವು ಅಂದರೆ ಸರಿ. ನನ್ನ ಮತ್ತು ಪ್ರತಿವಾದಿಯವರ ನಡುವೆ ಸರಿಬಾರದ ಕಾರಣ 1960 ನೇ ಸಾಲಿನಲ್ಲಿ ನನ್ನ ತಂದೆ ಹಾಗೂ 2 ನೇ ಹೆಂಡತಿ ಸುರ್ವಣಮ್ಮ ಮತ್ತು ಅವರ ಮಕ್ಕಳೊಂದಿಗೆ ಸೊರಬ ತಾಲ್ಲೂಕಿನ ಚಿಕ್ಕಬ್ಬೂರು ಗ್ರಾಮಕ್ಕೆ ಬಂದರು ಅಂದರೆ ಸರಿಯಲ್ಲ. ನಾವು ಸಹ ನಮ್ಮ ತಂದೆಯೊಂದಿಗೆ ಚಿಕ್ಕಬ್ಬೂರು ಗ್ರಾಮಕ್ಕೆ ಬಂದಿರುತ್ತೇವೆ. ಶಿವನಗೌಡ ರವರಿಗೆ ಅವರ ತಂದೆ ಮಲ್ಲಪ್ಪ ಗೌಡ ರವರಿಂದ ಬಂದಂತಹ ಜಮೀನುಗಳನ್ನು ನಮಗೆ ಬಿಟ್ಟು ಅವರು ಸೊರಬಕ್ಕೆ ವಲಸೆ ಬಂದರು ಅಂದರೆ ಸರಿಯಲ್ಲ.

ನಂತರ ನನ್ನ ತಂದೆ ಸೊರಬ ಚಿಕ್ಕಬ್ಬೂರು ಗ್ರಾಮಕ್ಕೆ ಬಂದು ಸ.ನಂ.129 ರಲ್ಲಿ 4 ಎಕರೆ 17 ಗುಂಟೆ ಜಮೀನನ್ನು ಗೇಣಿಗೆ ಪಡೆದರು ಅಂದರೆ ಸರಿ. ಸದರಿ ಆಸ್ತಿಯು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಅಂದರೆ ಸರಿ. ನಂತರ 1975 ನೇ ಸಾಲಿನಲ್ಲಿ ನನ್ನ ತಂದೆಗೆ ಮಲ್ಲಪ್ಪಗೌಡರಿಂದ ಬಂದಂತಹ ಜಮೀನುಗಳನ್ನು ಮಾರಾಟ ಮಾಡಿ ತಂದೆ ಜೊತೆಗೆ ಜೀವನ ನಡೆಸಲು ಸೊರಬಕ್ಕೆ ಬಂದಿರುತ್ತೇವೆ ಅಂದರೆ ಸರಿ.

2. ಕಾಳಿಹಳ್ಳಿಯಲ್ಲಿ ನನ್ನ ತಂದೆಗೆ ಮಲ್ಲಪ್ಪಗೌಡರವರಿಂದ ಬಂದಂತಹ ಸ.ನಂ.73/1, 2 ಬಿ, 4 ಎಕರೆ 33 ಗುಂಟೆ ಜಮೀನನ್ನು ರೂ.8,000/-ಗೆ ಮಾರಾಟ ಮಾಡಿರುತ್ತೇವೆ ಅಂದರೆ ಸರಿ. ಸದರಿ ಹಣಕ್ಕೆ ಇನ್ನು ಸ್ವಲ್ಪ ಹಣವನ್ನು ಸೇರಿಸಿ ರೂ.45,000/- ಗೆ ಚಿಕ್ಕಬ್ಬೂರು ಗ್ರಾಮದ ಸ.ನಂ.130 ರಲ್ಲಿ 12 ಎಕರೆ 17 ಗುಂಟೆ ಜಮೀನನ್ನು ಎಲ್.ಎಸ್.ನಾಯಕ ರವರಿಂದ ಕ್ರಯಕ್ಕೆ ಪಡೆದುಕೊಂಡಿರುತ್ತೇವೆ ಅಂದರೆ ಸರಿ. ಸದರಿ ಜಮೀನು ಎಲ್.ಎಸ್.ನಾಯಕ ರವರಿಗೆ ಗೇಣಿ ಮುಖಾಂತರ ಬಂದಂತಹ ಜಮೀನು ಆಗಿರುವುದರಿಂದ ಹಾಗೂ 15 ವರ್ಷ ಪರಭಾರ ಮಾಡಬಾರದು ಎಂದು ಷರತ್ತು ಇರುವುದರಿಂದ ನಮ್ಮ ಹೆಸರಿಗೆ ಖಾತೆ ಬದಲಾವಣೆ ಆಗಿರುವುದಿಲ್ಲ ಅಂದರೆ ಸರಿ. ನಂತರ ಅದೇ ಸರ್ವೆ ನಂಬರಿನಲ್ಲಿ 10 ಎಕರೆ 17 ಗುಂಟೆ ಸ್ವತ್ತನ್ನು ನನಗೆ, 4 ರಿಂದ 6 ನೇ ಪ್ರತಿವಾದಿಯವರ ಹೆಸರಿಗೆ ಜಂಟಿಯಾಗಿ ಹಾಗೂ ಉಳಿದ 2 ಎಕರೆ ಜಮೀನನ್ನು 7 ನೇ ಪ್ರತಿವಾದಿಯವರ ಹೆಸರಿಗೆ ಪ್ರತ್ಯೇಕವಾಗಿ ಕ್ರಯ ಮಾಡಿಕೊಟ್ಟರು ಅಂದರೆ ಸರಿ. ಸ.ನಂ.130 ಇದು ಪಿತ್ರಾರ್ಜಿತ ಸ್ವತ್ತು ಅಂದರೆ ಸರಿ. ದಾವಾ ಸ.ನಂ.129 ನನ್ನ ತಂದೆಯ

ಸ್ವಯಾರ್ಜಿತ ಆಸ್ತಿ ಅಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಂದೆಯು ದಿಃ31.07.2000 ನೇ ಇಸ್ವಿಯಲ್ಲಿ ನನಗೆ ಮತ್ತು ಪ್ರತಿವಾದಿಯವರಿಗೆ ಒಂದು ಮರಣ ಶಾಸನ ಪತ್ರವನ್ನು ಬರೆಸಿಕೊಟ್ಟಿರುತ್ತಾರೆ ಅಂದರೆ ಸರಿ. ಸದರಿ ಮರಣ ಶಾಸನ ಪತ್ರದಲ್ಲಿ ಸ.ನಂ.129 4 ಎಕರೆ 17 ಗುಂಟೆ ಜಮೀನನ್ನು 1 ರಿಂದ 3 ನೇ ಪ್ರತಿವಾದಿಯವರ ಪರವಾಗಿ ಬರೆದಿರುತ್ತಾರೆ ಅಂದರೆ ಸರಿ. ಸದರಿ ಮರಣ ಶಾಸನ ಪತ್ರದಲ್ಲಿ ಸ.ನಂ.130 12 ಎಕರೆ 17 ಗುಂಟೆ ಜಮೀನನ್ನು ವಾದಿ ಮತ್ತು 4 ರಿಂದ 7 ನೇ ಪ್ರತಿವಾದಿಯವರಿಗೆ ಬರೆದುಕೊಟ್ಟಿರುತ್ತಾರೆ ಅಂದರೆ ಸರಿ. ದಾವಾ ಸ.ನಂ.129 ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಆಗಿರುವುದರಿಂದ ನನಗೆ ಮತ್ತು 4 ರಿಂದ 7 ನೇ ಪ್ರತಿವಾದಿಯವರಿಗೆ ಯಾವುದೇ ಹಿಸ್ಸೆ ಇರುವುದಿಲ್ಲ ಅಂದರೆ ಸರಿಯಲ್ಲ. ಅದೇ ರೀತಿ ಸ.ನಂ.130 ಪಿತ್ರಾರ್ಜಿತ ಸ್ವತ್ತಾಗಿರುವುದರಿಂದ ನನಗೆ ಪ್ರತಿವಾದಿಯವರಿಗೆ ಸಮನಾದ ಹಿಸ್ಸೆ ಹಕ್ಕು ಇದೆ ಅಂದರೆ ಸರಿ. ದಾವಾ ಆಸ್ತಿ ನಂ.5 ರಲ್ಲಿಯೂ ಸಹ ವಾದಿ ಪ್ರತಿವಾದಿಯವರಿಗೆ ಸಮನಾದ ಹಿಸ್ಸೆ ಹಕ್ಕು ಇದೆ ಅಂದರೆ ಸರಿ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿ/ಸಿ 1 ನೇ ಹೆಚ್ಚುವರಿ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**